Monograph
No-83

ಅಂತರ್ ರಾಜ್ಯ ನೀರು ಹಂಚಿಕೆ :

# ಜ್ವಾಲಾಮುಖಿಯಾಗಿರುವ ಮಹದಾಯಿ ನದಿ ನೀರು ಹಂಚಿಕೆ ವಿವಾದ

ಕಳಸಾ-ಬಂಡೂರಿ ಯೋಜನೆ
ಕುರಿತು ವಿಚಾರಗೋಷ್ಠಿಯಲ್ಲಿ ಮಂಡಿಸಲ್ಪಟ್ಟ
ತಜ್ಞರ ಅಭಿಪ್ರಾಯಗಳು

ಸಂಕಲನ :
**ವಿನೋದ ಬಿ ಅಣ್ಣಿಗೇರಿ**
**ಡಿ. ಆರ್. ರೇವಣಕರ್**

सा विद्या या विमुक्तये
**ಸೆಂಟರ್ ಫಾರ್ ಮಲ್ಟಿ-ಡಿಸಿಪ್ಲಿನರಿ**
**ಡೆವಲಪಮೆಂಟ್ ರಿಸರ್ಚ್** (ಸಿ.ಎಮ್.ಡಿ.ಆರ್.)

2016

ಅಂತರ್ ರಾಜ್ಯ ನೀರು ಹಂಚಿಕೆ :

# ಜ್ವಾಲಾಮುಖಿಯಾಗಿರುವ ಮಹದಾಯಿ ನದಿ ನೀರು ಹಂಚಿಕೆ ವಿವಾದ

## ಕಳಸಾ-ಬಂಡೂರಿ ಯೋಜನೆ ಕುರಿತು ವಿಚಾರಗೋಷ್ಠಿಯಲ್ಲಿ ಮಂಡಿಸಲ್ಪಟ್ಟ ತಜ್ಞರ ಅಭಿಪ್ರಾಯಗಳು

ಸಂಕಲನ :
**ವಿನೋದ ಬಿ ಅಣ್ಣಿಗೇರಿ**
**ಡಿ. ಆರ್. ರೇವಣಕರ್**

**ಸೆಂಟರ್ ಫಾರ್ ಮಲ್ಟಿ-ಡಿಸಿಪ್ಲಿನರಿ ಡೆವಲಪಮೆಂಟ್ ರಿಸರ್ಚ್**
**(ಸಿ.ಎಮ್.ಡಿ.ಆರ್.)**
ಡಾ. ಬಿ. ಆರ್. ಅಂಬೇಡ್ಕರ ನಗರ, ಯಾಲಕ್ಕಿಶೆಟ್ಟರ ಕಾಲನಿ, ಧಾರವಾಡ-04
Tel (EPABX): 0091-836-2460453, 2460472 Fax : 0091-836-2460464
www.cmdr.ac.in

**2016**

## ವಿಚಾರಗೋಷ್ಠಿಯಲ್ಲಿ ಅಭಿಪ್ರಾಯಗಳನ್ನು ಮಂಡಿಸಿದ ಪ್ರಮುಖರು

**ಡಾ. ಟಿ. ವಿ. ರಾಮಚಂದ್ರ**
ಭಾರತೀಯ ವಿಜ್ಞಾನ ಸಂಸ್ಥೆ, ಬೆಂಗಳೂರು

**ಶ್ರೀ ಸುಭಾಷ ಗುಮಾಸ್ತೆ**
ಮಾಜಿ ಕಂಟ್ರಿ ಡೈರೆಕ್ಟರ್, ವರ್ಲ್ಡ್ಸ್ ನೇಬರ್ಸ್, ಯು.ಎಸ್.ಎ, ಧಾರವಾಡ

**ಶ್ರೀ ಹೇಮಂತ ಪಾಂಚಾಳ**
ಸಾಮಾಜಿಕ ಕಾರ್ಯಕರ್ತರು

**ಡಾ. ಚಿದಾನಂದ ರೆಡ್ಡಿ ಎಸ್ ಪಾಟೀಲ**
ನಿರ್ದೇಶಕರು, ಕಾನೂನು ಕಾಲೇಜು, ಕರ್ನಾಟಕ ರಾಜ್ಯ ಕಾನೂನು ವಿಶ್ವ ವಿದ್ಯಾಲಯ, ಹುಬ್ಬಳ್ಳಿ

**ಶ್ರೀ ಶಂಕರಪ್ಪ ಆರ್ ಅಂಬಲಿ**
ಕಾರ್ಯದರ್ಶಿ, ರೈತ ಸೇನಾ ಕರ್ನಾಟಕ, ನರಗುಂದ

**ಶ್ರೀ ಎ. ಆರ್. ಕುಸುಗಲ್ಲ**
ಕಾರ್ಯ ನಿರ್ವಾಹಕ ಅಭಿಯಂತರರು, ಕಳಸಾ ವಿಭಾಗ, ಖಾನಾಪುರ

**ಶ್ರೀ ಬಸವರಾಜ ಹೊಂಗಲ್**
ಉಪ ಮುಖ್ಯ ವರದಿಗಾರರು, ಉದಯವಾಣಿ, ಧಾರವಾಡ

ವಿಶೇಷ ಆಹ್ವಾನಿತರು:

**ಪ್ರೊ. ಪಿ. ಆರ್. ಪಂಚಮುಖಿ**
ವಿಶ್ರಾಂತ ಪ್ರಾಧ್ಯಾಪಕರು ಮತ್ತು ಚೇರಮನ್ನರು ಸಿ.ಎಮ್.ಡಿ.ಆರ್., ಧಾರವಾಡ

**ಡಾ. ಜಿ. ಕೆ. ಕಡೆಕೋಡಿ**
ಗೌರವ ಪ್ರಾಧ್ಯಾಪಕರು ಮತ್ತು ಸದಸ್ಯರು, ಆಡಳಿತ ಮಂಡಳಿ, ಸಿ.ಎಮ್.ಡಿ.ಆರ್.

**ಪ್ರೊ. ಟಿ. ಆರ್. ಸುಬ್ರಹ್ಮಣ್ಯ**
ಕುಲಪತಿಗಳು, ಕರ್ನಾಟಕ ರಾಜ್ಯ ಕಾನೂನು ವಿಶ್ವ ವಿದ್ಯಾಲಯ, ಹುಬ್ಬಳ್ಳಿ

ನೀರು ಹಂಚಿಕೆಯೊಂದಿಗೆ ಪರಿಸರ ಸಂರಕ್ಷಣೆಯನ್ನು ನೋಡಿಕೊಳ್ಳಬಹುದಾಗಿದೆ. ಈ ಸಮಿತಿಯಲ್ಲಿ ಪರಿಸರವಾದಿಗಳು, ಅರಣ್ಯ ಸಂರಕ್ಷಕರು, ಭೂಗರ್ಭ ಶಾಸ್ತ್ರಜ್ಞರುಗಳನ್ನು ಹೊಂದಿರುವುದರಿಂದ ಪರಿಣಾಮಕಾರಿಯಾಗಿ ಜಲ ಸಂರಕ್ಷಣೆಯನ್ನು ಮಾಡಬಹುದು.

ಈ ಪ್ರದೇಶವು ದೇಶದಲ್ಲಿಯ ಅತೀ ಹೆಚ್ಚು ಮಳೆ ಬೀಳುವ ಪ್ರದೇಶಗಳಲ್ಲಿ ಮೂರನೇ ಸ್ಥಾನದಲ್ಲಿದ್ದರೂ ಸಹ ಅದರ ಸಂಪೂರ್ಣ ಪ್ರಯೋಜನವನ್ನು ನಮ್ಮ ಜನರಿಗೆ ಉಪಯೋಗಿಸಿಕೊಳ್ಳಲಾಗುತ್ತಿಲ್ಲ. ಕಳೆದ 40 ವರ್ಷಗಳಿಂದ ನಮ್ಮನ್ನಾಳಿದ ಸರ್ಕಾರಗಳಾವವೂ ಈ ವಿಷಯದ ಕಡೆಗೆ ತೀವ್ರ ಗಮನ ಹರಿಸಲಿಲ್ಲ. ಕೇವಲ ಕಳಸಾ ಮತ್ತು ಬಂಡೂರಿಗಳ ಮೇಲಷ್ಟೇ ಗಮನವನ್ನು ಕೇಂದ್ರಿಕರಿಸದೇ ಮಹದಾಯಿ ಮತ್ತು ಮಲಪ್ರಭಾ ನದಿಗಳಿಂದ ಈ ಭಾಗದ ಜನರಿಗಾಗುವ ಪ್ರಯೋಜನಗಳ ಕಡೆಗೆ ಗಮನ ಹರಿಸುವುದು ಅವಶ್ಯಕವಾಗಿದೆ. ಇದು ಸಾಧ್ಯವಾಗಬೇಕಾದರೆ ಉನ್ನತಾಧಿಕಾರದ ಆಯೋಗವೊಂದನ್ನು ರಚಿಸಲೇಬೇಕು. ಹಾಗೂ ಈ ಆಯೋಗದಲ್ಲಿ ಪರಿಸರ ತಜ್ಞರು, ಹವಾಮಾನ ತಜ್ಞರು, ಪವನಶಾಸ್ತ್ರಜ್ಞರು, ನೀರಾವರಿ ತಜ್ಞರು, ಭೂಗರ್ಭ ಶಾಸ್ತ್ರಜ್ಞರು, ದೂರ ಸಂವೇದಿ ತಜ್ಞರು, ಕೃಷಿ ತಜ್ಞರು ಹಾಗೂ ಸಾಮಾಜಿಕ ಆರ್ಥಿಕ ತಜ್ಞರನ್ನು ಒಳಗೊಂಡಿರಬೇಕು. ನದಿಯ ನೀರಿನ ಪ್ರಮಾಣವನ್ನು ಅಂದಾಜು ಮಾಡುವುದು ಕಠಿಣವಾಗಿದ್ದು ಕ್ರಮಬದ್ಧವಾದ ಪದ್ಧತಿಯಲ್ಲಿ ಅಳೆಯಬೇಕಾಗುತ್ತದೆ. ಆದ್ದರಿಂದ ಸಂಬಂಧಪಟ್ಟ ತಂತ್ರಜ್ಞರನ್ನು ಈ ಆಯೋಗವು ಒಳಗೊಳ್ಳಬೇಕು. ಹಾಗೂ ಜಿಪಿಆರ್‌ಎಸ್ ತಂತ್ರಜ್ಞಾನವನ್ನೂ ಬಳಸಿಕೊಳ್ಳಬೇಕು.

## ಡಾ. ಟಿ. ವ್ಹಿ. ರಾಮಚಂದ್ರ

ಬೋಧಕರು, ಪರಿಸರ ವಿಜ್ಞಾನ, ಭಾರತೀಯ ವಿಜ್ಞಾನ ಕೇಂದ್ರ, ಬೆಂಗಳೂರು

ನದಿ ನೀರಿನ ವೈಜ್ಞಾನಿಕ ನಿರ್ವಹಣೆ ಕುರಿತು ವಿವರಿಸಲು ನಾನು ಇಚ್ಛಿಸುತ್ತೇನೆ. ನಾವು ಭಾರತೀಯ ವಿಜ್ಞಾನ ಸಂಸ್ಥೆ ಬೆಂಗಳೂರಿನಲ್ಲಿ ಕಳೆದ 25 ವರ್ಷಗಳಿಂದ ಅಂತರ್ ರಾಜ್ಯ ನೀರು ಹಂಚಿಕೆಯ ವಿಷಯದ ಮೇಲೆ ಕಾರ್ಯ ನಿರ್ವಹಿಸಿದ್ದೇನೆ. ಅದರಲ್ಲೂ ಮುಖ್ಯವಾಗಿ ಉತ್ತರ ಕನ್ನಡ ಜಿಲ್ಲೆ ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಾರ್ಯ ನಿರ್ವಹಿಸಿದ್ದೇನೆ. ಅದರ ಅನುಭವವನ್ನು ಹಂಚಿಕೊಳ್ಳಲು ಇಚ್ಛಿಸುತ್ತೇನೆ. ಪ್ರತಿಯೊಬ್ಬರೂ ಪರಿಸರ ಸಂರಕ್ಷಣೆ ಕುರಿತು

ಮಾತನಾಡುತ್ತಾರೆ. ನಾವು ಜಲಾಶಯಗಳನ್ನು ಸಂರಕ್ಷಿಸಿಕೊಳ್ಳುವುದರಿಂದ ಪರಿಸರವನ್ನು ಸಮತೋಲನದಲ್ಲಿ ಇಡಲು ಸಾಧ್ಯವಾಗುತ್ತದೆ. ಹಾಗೂ ಹೆಚ್ಚುವರಿ ನೀರನ್ನು ಮಾನವನ ಅವಶ್ಯಕತೆಗಳಿಗಾಗಿ ಬಳಸಿಕೊಳ್ಳಬಹುದಾಗಿದೆ. ಹೇಗೆ ಮತ್ತು ಯಾವ ಪದ್ಧತಿಯಲ್ಲಿ ಜಲಾಶಯಗಳನ್ನು ಸಂರಕ್ಷಿಸಿಕೊಳ್ಳಬೇಕೆಂದು ನಾವು ಬಹಳಷ್ಟು ಪ್ರಸಂಗಗಳಲ್ಲಿ ವಿವರಿಸಿದ್ದೇವೆ. ಎಲ್ಲಿ ಅಚ್ಚುಕಟ್ಟು ಪ್ರದೇಶದ ಸುತ್ತಲೂ ಹಚ್ಚ ಹಸಿರು ಸಸ್ಯ ಸಂಪತ್ತನ್ನು ಹೊಂದಿದ್ದರೆ ಅಂತಹ ಪ್ರದೇಶಗಳಲ್ಲಿ ಹಳ್ಳಗಳ ಜಾಲವು ಹೇರಳವಾಗಿಯೂ ಮತ್ತು ಸಮೃದ್ಧತೆಯಿಂದ ಕೂಡಿರುತ್ತದೆ. ಅದೇ ಅರಣ್ಯಗಳು ಇಲ್ಲದೇ ಇರುವ ಪ್ರದೇಶಗಳಲ್ಲಿ ನೀರಿನ ಹರಿವು ಸರಿಯಾಗಿರುವುದಿಲ್ಲ. ಇದರಿಂದ ತಿಳಿಯುವುದೇನೆಂದರೆ ಅರಣ್ಯ ಹಾಗೂ ಜಲ ಸಂಪನ್ಮೂಲಗಳ ನಡುವೆ ಧನಾತ್ಮಕ ಸಂಬಂಧ ಇರುವುದು ತಿಳಿದು ಬರುತ್ತದೆ. ಇದು ನಮ್ಮ ಬಹಳಷ್ಟು ಅಧ್ಯಯನಗಳಿಂದ ತಿಳಿದು ಬಂದಿರುತ್ತದೆ.

ಶರಾವತಿ ನದಿಯ ಉದಾಹರಣೆಯನ್ನೇ ತೆಗೆದುಕೊಳ್ಳುವುದಾದರೆ ಈ ನದಿಯು 128 ಕಿ.ಮೀ. ಉದ್ದವಿದ್ದು ಪೂರ್ವ ಮತ್ತು ಪಶ್ಚಿಮ ನದಿಗಳನ್ನು ವಿಭಾಗಿಸುವುದಾದರೆ ಪೂರ್ವಕ್ಕೆ ಶೇ.45ರಷ್ಟು ಅರಣ್ಯವಿದ್ದು ಮಳೆ ಪ್ರಮಾಣ 1700ಮಿ.ಮೀ ರಿಂದ 1800ಮಿ.ಮೀ ಇದೆ. ಸುಮಾರು 100 ವರ್ಷಗಳ ಹಿಂದೆ ಇದೇ ಪ್ರದೇಶದಲ್ಲಿ ಮಳೆ ಪ್ರಮಾಣ 3500 ರಿಂದ 4500ಮಿ.ಮೀ ನಷ್ಟಿತ್ತು. ಪಶ್ಚಿಮ ಭಾಗದಲ್ಲಿ ಅರಣ್ಯ ಪ್ರದೇಶವು ಶೇ.65ರಷ್ಟಿದ್ದು ಇದರ ಪರಿಣಾಮದಿಂದ ಮಳೆ ಪ್ರಮಾಣ 4500ರಿಂದ 4600ಮಿ.ಮೀ ಇದೆ. ಆದ್ದರಿಂದ ನಮ್ಮ ಅಧ್ಯಯನಗಳು ಅರಣ್ಯ ಮತ್ತು ನದಿಗಳಲ್ಲಿರುವ ನೀರಿನ ಪ್ರಮಾಣಕ್ಕೆ ಧನಾತ್ಮಕ ಸಂಬಂಧ ಇರುವುದನ್ನು ಪುಷ್ಟೀಕರಿಸುತ್ತದೆ. ನಾವು ಹಳ್ಳಗಳಲ್ಲಿ ನೀರಿನ ಹರಿವು ಮತ್ತು ಪ್ರಮಾಣವನ್ನು ಅಭ್ಯಸಿಸಿ ವರ್ಷವಿಡೀ ನೀರು ಲಭ್ಯ ಇರುವುದನ್ನು 'ಅ' ವರ್ಗವೆಂದು 9 ತಿಂಗಳು ನೀರಿನ ಲಭ್ಯತೆ ಹೊಂದಿರುವ ಹಳ್ಳಗಳನ್ನು 'ಬ' ವರ್ಗವೆಂದು 6 ತಿಂಗಳು ನೀರು ಲಭ್ಯವಿರುವುದನ್ನು 'ಕ' ವರ್ಗವೆಂದು ಹಾಗೂ ಕೇವಲ ಮಳೆಗಾಲದಲ್ಲಿ ಮಾತ್ರ ನೀರು ಲಭ್ಯ ಇರುವುದನ್ನು 'ಡ' ವರ್ಗವೆಂದು ಪರಿಗಣಿಸುತ್ತೇವೆ. ನಮ್ಮ 18 ತಿಂಗಳ ಪರಿವೀಕ್ಷಣೆಯಿಂದ ತಿಳಿದು ಬಂದಿದ್ದೇನೆಂದರೆ ಎಲ್ಲಿ ದಟ್ಟ ಮತ್ತು ಹಸಿರು ಅರಣ್ಯ ಪ್ರದೇಶವಿದೆಯೋ ಅಲ್ಲಿ 12 ತಿಂಗಳೂ ನೀರಿನ ಲಭ್ಯತೆ ಇರುತ್ತದೆ. ಅಂದರೆ ದಟ್ಟ ಅರಣ್ಯ ಇರುವ ಪ್ರದೇಶಗಳಲ್ಲಿ ಸರ್ವಕಾಲಿಕ ನೀರು ಹರಿಯುವುದನ್ನು ಕಾಣಬಹುದು. ನಮ್ಮ ಅಧ್ಯಯನದಿಂದ ತಿಳಿದುಬರುವ ಮತ್ತೊಂದು

ವಿಷಯವೇನೆಂದರೆ ದಟ್ಟ ಅರಣ್ಯ ಹಾಗೂ ಸರ್ವಕಾಲಿಕ ನದಿಗಳಿಂದ ಅಲ್ಲಿಯ ವಾತಾವರಣವು ಆರೋಗ್ಯಕರವಾಗಿರುತ್ತದೆ. ದಟ್ಟ ಅರಣ್ಯ ಇರುವ ಪ್ರದೇಶಗಳಲ್ಲಿ ನದಿಗಳಲ್ಲಿ ಹೂಳು (ಕೆಸರು) ಕಡಿಮೆ ಪ್ರಮಾಣದಲ್ಲಿ ಇರುತ್ತದೆ. ಅರಣ್ಯ ಪ್ರದೇಶ ಕಡಿಮೆ ಇರುವುದರಿಂದಲೇ ಮಲಪ್ರಭಾ ಪ್ರದೇಶದಲ್ಲಿ ಹೂಳು ಹೆಚ್ಚಿರುವುದು ಕಂಡು ಬರುತ್ತದೆ. ಇದು ಜಲಾಶಯಗಳಲ್ಲಿ ನೀರಿನ ಸಂಗ್ರಹಣಾ ಪ್ರಮಾಣವನ್ನು ಕಡಿಮೆಗೊಳಿಸುತ್ತದೆ.

ನಾವು ಮಳೆಯಿಂದ ನೀರು ಶೇಖರಣೆ ಕುರಿತು ಅಧ್ಯಯನ ನಡೆಸಿದ್ದೇವೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ಎಷ್ಟು ಮಳೆ ಬೀಳುತ್ತದೆ ಮತ್ತು ಯಾವ ಪ್ರದೇಶಗಳಲ್ಲಿ ಸಂಗ್ರಹಣೆಯಾಗುತ್ತದೆಂಬುದನ್ನು ಪರೀಕ್ಷಿಸಿದ್ದೇವೆ. ಹಾಗೂ ಎಷ್ಟು ಪ್ರಮಾಣದ ನೀರು ವರ್ಷದ ಬೇರೆ ಬೇರೆ ತಿಂಗಳುಗಳಲ್ಲಿ ಹಳ್ಳಗಳಲ್ಲಿ ಹರಿಯುತ್ತದೆ ಮತ್ತು ಆ ಪ್ರದೇಶದ ಜನರಿಂದ ಕುಡಿಯುವ ನೀರು, ಕೃಷಿಗಾಗಿ ಮತ್ತು ಪ್ರಾಣಿಗಳಿಗಾಗಿ ಎಷ್ಟು ಪ್ರಮಾಣದ ಬೇಡಿಕೆಯಿದೆ ಎಂದು ಗ್ರಾಮಗಳಲ್ಲಿ ಅಧ್ಯಯನ ಮಾಡಿದ್ದೇವೆ. ಅಲ್ಲಿಯ ಜಲ ಪ್ರಮಾಣವನ್ನು ಪರೀಕ್ಷಿಸಲಾಗಿ ಜಲ ವಿಜ್ಞಾನದ ಅನ್ವಯ ಎಲ್ಲಿ ದಟ್ಟ ಅರಣ್ಯ ಪ್ರದೇಶವಿದೆಯೋ ಅಲ್ಲಿ ನೀರಿನ ಲಭ್ಯತೆ ಹೇರಳವಾಗಿರುವುದು ಕಂಡು ಬಂದಿತು.

ನಾವು ಈಗ ಮಹದಾಯಿ ಮತ್ತು ಮಲಪ್ರಭಾ ನದಿಗಳ ಜೋಡಣೆ ವಿಚಾರವನ್ನು ನೋಡುವುದಾದರೆ, ಇದರಿಂದ ಹುಬ್ಬಳ್ಳಿ-ಧಾರವಾಡ, ಬೆಳಗಾವಿ ಮತ್ತು ಸುತ್ತಮುತ್ತಲಿನ ಪ್ರದೇಶಗಳಿಗೆ ಕುಡಿಯುವ ನೀರನ್ನು ಪೂರೈಸಬಹುದಾಗಿದೆ. ಮಲಪ್ರಭಾ ಯೋಜನೆಯ 1974 ರಲ್ಲಿಯೇ ಪೂರ್ಣಗೊಂಡಿದ್ದು ತದ ನಂತರ ನದಿಯ ಅಚ್ಚುಕಟ್ಟು ಪ್ರದೇಶದಲ್ಲಿ ಗಮನಾರ್ಹವಾದ ಬದಲಾವಣೆಯಾಗಿದೆ. ಹಸಿರು ಪ್ರದೇಶವು ಕಡಿಮೆಯಾಗಿರುವುದು ಸ್ಪಷ್ಟ ಅಂಶ. ತತ್ಪರಿಣಾಮವಾಗಿ ಮಳೆಯ ಪ್ರಮಾಣ ಕಡಿಮೆಯಾಗಿದ್ದಲ್ಲದೇ ಅಂತಿಮವಾಗಿ ನದಿಯ ನೀರಿನ ಲಭ್ಯತೆಯು ಕಡಿಮೆಯಾಗಿದೆ.

ಮಲಪ್ರಭಾ ಯೋಜನೆ ಪೂರ್ಣಗೊಂಡ ನಂತರ ಅಚ್ಚುಕಟ್ಟು ಪ್ರದೇಶದಲ್ಲಿನ ರೈತರು ಸಂಪೂರ್ಣವಾಗಿ ವಾಣಿಜ್ಯ ಬೆಳೆಗಳ ಮೇಲೆ ಅವಲಂಬಿತರಾಗಿದ್ದು ಅದರಲ್ಲೂ ವಿಶೇಷವಾಗಿ ಕಬ್ಬು ಬೆಳೆಯನ್ನು ಬೆಳೆಯಲಾರಂಭಿಸಿತು. ಕಬ್ಬು ಬೆಳೆಗೆ ಹೆಚ್ಚಿನ ನೀರಿನ ಅವಶ್ಯಕತೆ ಇದೆ. ಇದು ರೈತರು ಹಿಡಿದ ತಪ್ಪು ಹಾದಿಯಾಗಿದೆ. ಅರಣ್ಯ ನಾಶದಿಂದಾಗಿ ನದಿಯಲ್ಲಿ ಹೂಳಿನ ಪ್ರಮಾಣ ಹೆಚ್ಚಾಗಿ ಜಲಾಶಯದ ನೀರು ಸಂಗ್ರಹಣಾ ಪ್ರಮಾಣ ಕಡಿಮೆಯಾಗಿದೆ. ನೀರಿನ ಲಭ್ಯತೆಯ

ಪ್ರಮಾಣವು ತೀವ್ರವಾಗಿ ಕಡಿಮೆಯಾಗಿರುವುದರಿಂದ ಮಹದಾಯಿಯಿಂದ ಮಲಪ್ರಭಾ ನದಿಗೆ ನೀರನ್ನು ಪಡೆಯುವ ದುರ್ದೆಶೆ ನಮಗೆ ಬಂದಿದೆ. ನನಗನಿಸುವುದೇನೆಂದರೆ, ಮಹದಾಯಿ ನೀರನ್ನು ಪಡೆಯುವುದು ಮಾತ್ರ ದೀರ್ಘಾವಧಿಯಲ್ಲಿ ಪರಿಹಾರವಾಗಲಾರದು. ಅದರೊಂದಿಗೆ ಅರಣ್ಯೀಕರಣ ಜಲಾನಯನ ಪ್ರದೇಶದ ನಿರ್ವಹಣೆ ಇತ್ಯಾದಿಗಳನ್ನು ಅಭಿವೃದ್ಧಿಪಡಿಸಬೇಕಾಗಿದೆ. ಸರ್ಕಾರವು ಅಚ್ಚುಕಟ್ಟು ಪ್ರದೇಶದಲ್ಲಿ ಪರಿಸ್ಥಿತಿಯನ್ನು ಏಕೆ ಸುಧಾರಿಸುತ್ತಿಲ್ಲವೆಂದು ಆಶ್ಚರ್ಯವಾಗುತ್ತಿದೆ.

ಅದರಂತೆ, ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳಿಗೆ ಎತ್ತಿನಹೊಳೆ ಯೋಜನೆಯಿಂದ ನೀರು ಪಡೆಯುವುದರ ಬದಲಾಗಿ ಸ್ಥಳೀಯವಾಗಿ ಕೆರೆ ಮತ್ತು ಹಳ್ಳಗಳನ್ನು ಅಭಿವೃದ್ಧಿಪಡಿಸಿ ಜಲ ಸಂಪನ್ಮೂಲಗಳನ್ನು ವೃದ್ಧಿಸಿಕೊಳ್ಳುವುದು ಒಳ್ಳೆಯದು. ಕಳೆದ 30–35 ವರ್ಷಗಳಿಂದ ಕೋಲಾರದಲ್ಲಿ ಬಹಳಷ್ಟು ಕೆರೆಗಳು ಒತ್ತುವರಿಯಾಗಲ್ಪಟ್ಟಿರುವುದರಿಂದ ಸಧ್ಯ ಜಲ ಬಿಕ್ಕಟ್ಟು ಉದ್ಭವಿಸಿದೆ. ಇದರಿಂದಾಗಿ ಅರಣ್ಯ ಮತ್ತು ಪುಷ್ಪ ಬೇಸಾಯ ನಾಶ ಹೊಂದಿರುವುದು ಸ್ಪಷ್ಟವಾಗುತ್ತದೆ. ಇದು ಒಣ ಪ್ರದೇಶವಾಗಿರುವುದರಿಂದ ಇಲ್ಲಿ ಜೋಳ, ರಾಗಿ ಮತ್ತು ನವಣೆಗಳನ್ನು ಬೆಳೆಯಬಹುದಾಗಿದೆ. ಇದರ ಬದಲಾಗಿ ರೈತರು ಕಬ್ಬು ಮತ್ತು ಇತರೆ ವಾಣಿಜ್ಯ ಬೆಳೆಗಳನ್ನು ಬೆಳೆಯಲು ನೀರಿಗೆ ಬೇಡಿಕೆ ಹೆಚ್ಚಾಗಿದೆ. ಪ್ರಾಸಂಗಿಕವಾಗಿ ಬೇಡಿಕೆಗೆ ತಕ್ಕಷ್ಟು ನೀರಿನ ಪೂರೈಕೆ ಹೆಚ್ಚಿರುವುದಿಲ್ಲ. ಹಾಗೂ ಕೆರೆಗಳಲ್ಲಿ ಹೂಳು ತುಂಬಿಕೊಂಡಿರುವುದರಿಂದ ಅವುಗಳ ಸಂಗ್ರಹಣಾ ಸಾಮರ್ಥ್ಯ ಕಡಿಮೆಯಾಗಿದೆ. ಈ ಪ್ರದೇಶಗಳ ಕೆರೆಯ ನೀರಿನಲ್ಲಿ ಫ್ಲೋರೈಡ್ ಸಮಸ್ಯೆ ಇದೆ. ಎಲ್ಲಿಯವರೆಗೆ ಕೆರೆಗಳಲ್ಲಿ ವೈಜ್ಞಾನಿಕವಾಗಿ ನೀರಿನ ಮಟ್ಟವನ್ನು ನಿರ್ವಹಿಸುವುದಿಲ್ಲವೋ ಅಲ್ಲಿಯವರೆಗೆ ನಾವು ನೀರಿನ ಕೊರತೆಯ ಸಮಸ್ಯೆಯಿಂದ ಹೊರ ಬರಲಾರೆವು. ಪರಿಣಾಮಕಾರಿ ನಿರ್ವಹಣೆಯಿಂದ ಅಚ್ಚುಕಟ್ಟು ಪ್ರದೇಶದಲ್ಲಿ ಫ್ಲೋರೈಡ್ ಮತ್ತು ಆರ್ಸೆನಿಕ್ ಸಮಸ್ಯೆಗಳನ್ನು ನಿವಾರಿಸಬಹುದಾಗಿದೆ. ವಾಣಿಜ್ಯ ಬೆಳೆಗಳನ್ನು ಬೆಳೆಯುವಲ್ಲಿ ಮಾತ್ರ ರೈತರ ಆತ್ಮಹತ್ಯೆ ಪ್ರಕರಣಗಳು ಹೆಚ್ಚಿರುವುದು ಅಧ್ಯಯನಗಳಿಂದ ತಿಳಿದು ಬರುತ್ತದೆ. ಇದಕ್ಕೂ ನೀರಿನ ಲಭ್ಯತೆಗೆ ಸಂಬಂಧಿಸಿದ ಅಂತರ್ಗತ ಸಮಸ್ಯೆಗಳೇ ಕಾರಣ.

ಸಂಕ್ಷಿಪ್ತವಾಗಿ ಹೇಳುವುದಾದರೆ ಅಚ್ಚುಕಟ್ಟು ಪ್ರದೇಶಗಳ ವೈಜ್ಞಾನಿಕ ನಿರ್ವಹಣೆ, ಅರಣ್ಯ ಮತ್ತು ಹುಲ್ಲುಗಾವಲುಗಳನ್ನು ಬೆಳೆಸುವುದು, ಸಮರ್ಪಕ ಬೆಳೆ ಪದ್ಧತಿಯನ್ನು

ಅಳವಡಿಸಿಕೊಳ್ಳುವುದು, ಮಣ್ಣಿನ ಗುಣಗಳನ್ನು ಆಧರಿಸಿ ಸ್ಥಿರವಾದ ಬೆಳೆಗಳನ್ನು ಬೆಳೆಸುವುದು ಅಂತಿಮವಾಗಿ ಕೆರೆ ಮತ್ತು ಜಲಾಶಯಗಳಲ್ಲಿ ಸುವ್ಯವಸ್ಥಿತವಾಗಿ ಹೂಳು ತೆಗೆಯುವುದು ಇತ್ಯಾದಿ ಕ್ರಮಗಳನ್ನು ಕೈಗೊಳ್ಳುವುದರಿಂದ ನೀರಿನ ಕೊರತೆಯನ್ನು ನೀಗಬಹುದು. ಕೇವಲ ನದಿಗಳ ನೀರಿನ ಪಥ ಬದಲಾಯಿಸುವುದು ಅಂತಿಮ ಪರಿಹಾರವಲ್ಲ.

**ಪ್ರೊ. ಟಿ .ಆರ್. ಸುಬ್ರಹ್ಮಣ್ಯ**
ಕುಲಪತಿಗಳು,
ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ, ಹುಬ್ಬಳ್ಳಿ

ಅಂತರ್ ರಾಜ್ಯ ನೀರು ಹಂಚಿಕೆಯ ವಿಷಯ ಬಂದಾಗ, ವಿವಾದಗಳನ್ನು ಬಗೆಹರಿಸಲು ಪೂರಕವಾಗುವ ಪೂರ್ವ ಯೋಜಿತ ಸೌಹಾರ್ದಯುತವಾದ ಅಧ್ಯಯನಗಳ ಅವಶ್ಯಕತೆ ಇದೆ. ಇವುಗಳು ವೈಜ್ಞಾನಿಕವಾಗಿ ಕ್ರೋಢೀಕರಿಸಿದ ಹಾಗೂ ವಿವಾದಕ್ಕೆ ಸಂಬಂಧಪಟ್ಟ ವಿವಿಧ ನಿಯತಾಂಕಗಳನ್ನು ಹೊಂದಿರುವ ಅಂಕಿ ಅಂಶಗಳ ಕ್ರೋಢೀಕರಣವನ್ನು ಹೊಂದಿರಬೇಕು. ಅಂದರೆ ಇವುಗಳು ಭವಿಷ್ಯತ್ತನಲ್ಲಿ ಬರಬಹುದಾದ ವಿವಾದಗಳನ್ನು ಬಗೆಹರಿಸಲು ಸಹಾಯಕಾರಿಯಾಗುತ್ತವೆ. ಹೆಚ್ಚಿದ ಜನಸಂಖ್ಯೆ ಮತ್ತು ಬದಲಾದ ಪರಿಸ್ಥಿತಿಯಲ್ಲಿ ನಾವು ಹೆಚ್ಚುವರಿ ಭೂಮಿಯನ್ನು ಹೊಂದಿಲ್ಲ ಹಾಗೂ ಲಭ್ಯವಿರುವ ಭೂ ಹಿಡುವಳಿಗಳಲ್ಲಿಯೇ ಉತ್ತಮವಾಗಿ ನಿರ್ವಹಿಸುವಂತಹ ಸಂಸ್ಥೆಗಳು ನಮ್ಮಲ್ಲಿಲ್ಲ. ಇಂತಹ ಪರಿಸ್ಥಿತಿಯಲ್ಲಿ ನದಿ ಜೋಡಣೆಯೊಂದೇ ಪರಿಹಾರ. ಅಂತರಾಷ್ಟ್ರೀಯ ನ್ಯಾಯಾಲಯವು ಇಂತಹ ಪ್ರಕರಣಗಳಿಗೆ ತೀರ್ಪು ನೀಡಿದೆ.

ಈ ಹಿನ್ನೆಲೆಯಲ್ಲಿ ಮುಂದಿನ ಐವತ್ತು ವರ್ಷಗಳವರೆಗಿನ ಯೋಜಿತ ಜನಸಂಖ್ಯೆಗೆ ಅನುಕೂಲವಾಗುವಂತೆ ರಾಜ್ಯಗಳು ಯೋಜನೆಗಳನ್ನು ರೂಪಿಸಿಕೊಳ್ಳಬೇಕು. ಇಂತಹ ಅಂತರ್ ರಾಜ್ಯ ಅಥವಾ ಅಂತರ್ ಪ್ರಾದೇಶಿಕ ವಿವಾದಗಳಿಗೆ ಕೆಳ ಹರಿವು ಮತ್ತು ಮೇಲೆ ಹರಿವಿನ ಜನಸಂಖ್ಯೆಗೆ ಪ್ರಾಕೃತಿಕ ನ್ಯಾಯ ಮತ್ತು ಸಮಾನತೆ ಸಿಗುವಂತೆ ನಿಯಮಗಳ ಚೌಕಟ್ಟನ್ನು ರಚಿಸಬೇಕು. ಮೂಲಭೂತವಾಗಿ ಕುಡಿಯುವ ನೀರಿನ ಹಕ್ಕನ್ನು ನಾವು ಗೌರವಿಸಬೇಕು. ನೀರಿನ ಸಮರ್ಪಕ ಬಳಕೆ ಒಂದು ಪ್ರಮುಖ ಅಂಶ. ಇದರಿಂದಾಗಿ ಕೊರತೆಯಲ್ಲಿರುವ ಸಂಪನ್ಮೂಲಗಳ ಸೂಕ್ತ ಉಪಯೋಗದ ಕಡೆಗೆ ಗಮನ ಹರಿಸಬೇಕು.